ಅಪೂರ್ವ ತಿಳಿಯಾಗಿ ನಗುತ್ತ, 'ಇಲ್ಲ ಡಾಕ್ಟರ್..!' ಎಂದಳು. ಅವನ ಸೌಮ್ಯ ನಡೆ, ನುಡಿ ಅವನ ವ್ಯಕ್ತಿತ್ವಕ್ಕೆ ಅವಳ ಮನದ ಕಹಿ ಮರೆಯಾಗಿತ್ತು.

'ಡಾಕ್ಟರ್ ಅಂತ ಕರೆಯಬೇಡಿ... ಆ ಸಂಬೋಧನೆ ನಮ್ಮ ಸ್ನೇಹಕ್ಕೆ ಔಪಚಾರಿಕತೆಯಾಗುತ್ತೆ ಅಂತ ಅನ್ನಲ್ವಾ..? ನೀವು ನನ್ನನ್ನು ಆದರ್ಶ ಅಂತ ಕರೆಯಬಹುದು.. ನಾನು ನಿಮ್ಮನ್ನು ಹೇಗೆ ಹೆಸರು ಹಿಡಿದು ಕರೀತೀನೋ, ಹಾಗೇ ನೀವೂ ನನ್ನ ಹೆಸರು ಹಿಡಿದು ಕರೀರಿ' ಎಂದ. ಅವನ ಸ್ನೇಹಕ್ಕೆ ಅವಳು ಸೋಲಲೇಬೇಕಾಯಿತು. ಅಪೂರ್ವಳ ಕಾಲೇಜಿನಲ್ಲಿ ಕೋ ಎಜುಕೇಶನ್ ವ್ಯವಸ್ಥೆ ಇದ್ದೂ, ಎಷ್ಟೋ ಹುಡುಗರು ಅವಳ ಸ್ನೇಹ ಸಲುಗೆ ಬೆಳೆಸಲು ಯತ್ನಿಸಿದರೂ ಅಪೂರ್ವ, ಉದ್ದೇಶಪೂರ್ವಕವಾಗಿಯೇ ತನ್ನ ಸುತ್ತ ಲಕ್ಷ್ಮಣ ರೇಖೆ ಎಳೆದು ಕೊಂಡಂತೆ ಗಂಭೀರವಾಗಿದ್ದಳು. ಆ ರೇಖೆ ದಾಟಿ ಅವಳ ಮನಸ್ಸಿನೊಳಗೆ ನುಸುಳಲು ಅವಳು ಯಾರಿಗೂ ಆಸ್ಪದ ಕೊಟ್ಟಿರಲಿಲ್ಲ. ತನ್ನ ಇತಿಮಿತಿಗಳನ್ನು ಅರಿತ ಅಪೂರ್ವ, ತನ್ನ ಜೀವನದ ಪ್ರಮುಖ ಉದ್ದೇಶ, ಗುರಿ ಇರುವುದು ತನ್ನ ವಿದ್ಯೆ, ತನ್ನ ಸ್ವಾವಲಂಬನೆ ಎಂದು ಬಲವಾದ ವಿಶ್ವಾಸವಿರಿಸಿಕೊಂಡಿದ್ದರಿಂದ ಅವಳ ಧ್ಯೇಯವನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಿರಲಿಲ್ಲ. ಅವಳ ತರಗತಿಯ ಹುಡುಗರಿರಲಿ, ಹುಡುಗಿಯರೂ ಸಹ ಅವಳೊಡನೆ ಆತ್ಮೀಯತೆ ಬೆಳೆಸುವ ಆಸಕ್ತಿ ತೋರಿರಲಿಲ್ಲ. ಅಪೂರ್ವಳ ಅತಿಯಾದ ಗಾಂಭೀರ್ಯ, ಸಾಧಾರಣ ದರ್ಜೆಯ ಉಡುಗೆ ತೊಡುಗೆ, ಖರ್ಚಿನಲ್ಲಿನ ಮಿತಿ ಅವಳ ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತಿದ್ದುದರಿಂದ ಯಾರಿಗೂ ಅಪೂರ್ವಳ ಸ್ನೇಹ ಸಂಪಾದಿಸುವ ಆಸಕ್ತಿ ಮೂಡಿರಲಿಲ್ಲ. ಅಪೂರ್ವ ಕೂಡಾ ತಾನಾಯಿತು, ತನ್ನ ಓದಾಯಿತು ಎನ್ನುವಂತಿದ್ದಳು. ಹೀಗಿರುವಾಗ ಆದರ್ಶನೇ ಮೊದಲ ಬಾರಿಗೆ ಹೀಗೆ ಅವಳೊಡನೆ ಸ್ನೇಹದ ಹಸ್ತ ಚಾಚಿದ್ದ.

ಅಪೂರ್ವಳನ್ನು ಓ.ಪಿ.ಡಿ. ಗೆ ಕರೆದೊಯ್ದು ಅದಕ್ಕೆ ಮುಲಾಮು ಹಚ್ಚಿ ನೋವು ನಿವಾರಣೆಗೆ ಮಾತ್ರೆಗಳನ್ನು ಕೊಡುತ್ತ, 'ಈ ಮಾತ್ರೆಗಳನ್ನು ತಗೊಳ್ಳಿ.. ನೋವು ಕಮ್ಮಿಯಾಗುತ್ತೆ.. ಆಹಾರ ಸೇವನೆ ನಂತ್ರ ತಗೋಬೇಕು..' ಅವನು ವೈದ್ಯನ ದಾಟಿಯಲ್ಲೇ ನುಡಿದಾಗ ಅಪೂರ್ವಳಿಗೆ ನಗು ಬಂದಿತು. 'ಆಯ್ತು ಡಾಕ್ಟ್ರೇ..' ಎಂದು ನಾಟಕೀಯವಾಗಿ ನುಡಿದು ತಡೆಯಲಾರದೇ ನಕ್ಕಳು. ಅವಳ ಶುಭ್ರ ನಗು ಮುಖವನ್ನು ಆದರ್ಶ ಕಣ್ಣರಳಿಸಿ ನೋಡಿದ.

'ಫೀಸೆಷ್ಟು..?' ಅವಳು ಕೀಟಲೆ ಮಾಡುವ ಸಲುವಾಗಿ ಪ್ರಶ್ನಿಸಿದಳು. ಅವಳು ಸತ್ಯವಾಗಿಯೂ ಕೇಳುತ್ತಿದ್ದಾಳೆಂದು ಭಾವಿಸಿ, 'ನಿಮ್ಹತ್ರ ದುಡ್ಡು ತಗೋತೀನಾ..? ಬೇಡಾ ಪರ್ವಾಗಿಲ್ಲ..' ಎಂದ.

ಅಪೂರ್ವ ಎದ್ದು ನಡೆದಾಗ ಆದರ್ಶ ಮತ್ತೆ ಅವಳನ್ನು ಹಿಂಬಾಲಿಸಿಕೊಂಡು ಬಂದು ಸಮೀಪಿಸಿದಾಗ ಅವಳು ಪ್ರಶ್ನಾರ್ಥಕ ನೋಟ ಬೀರಿ 'ಡ್ಯೂಟಿ ಇಲ್ವಾ?'

'ಇದೆ..ಆದ್ರೆ ವಿಜಯ ಅತ್ತೆ ಹೊಸ ಡ್ಯೂಟಿ ಕೊಟ್ಟಿದಾರಲ್ವಾ..? ಸೂರ್ಯ ಇನ್ನೂ ಸ್ಟೇಶನ್ನಲ್ಲಿ ಇದ್ದಾನೆ ಅಂತ ಅವ್ರು ಭಾವಿಸಿದ್ದಾರೆ..ನಾನು ಸತ್ಯ ತಿಳಿಸಲು ಹೋಗಿಲ್ಲ..ಸೂರ್ಯ ತಮ್ಮೊಡನೆ ಮನೇಲೇ ಇರ್ಬೇಕು..ಅವ್ರ ಇಳಿವಯಸ್ಸಿನಲ್ಲಿ ಅವನು ಕಾಳಜಿ ವಹಿಸಬೇಕು ಅಂತ ಅವ್ರು ಆಸೆ ಪಡ್ತಾರೆ..ನನ್ನನ್ನು ಸ್ಟೇಶನ್‌ಗೆ ಹೋಗಿ ವಿಚಾರಿಸಿ ಬರಲು ಹೇಳಿದ್ದಾರೆ'.

ಅಪೂರ್ವಳ ಮುಖ ಗಂಭೀರವಾಯಿತು. ತಾಯಿಯಾಗಿ ಅವ್ರ ಆಸೆ ತಪ್ಪೆಂದು ಕಾಣುವುದಿಲ್ಲ. ಆದರೆ ಸೂರ್ಯನಿಗೆ ಆ ಯೋಗ್ಯತೆ ಇಲ್ಲ ಎಂಬ ಸತ್ಯ, ಸುಲಭವಾಗಿ ಆ ತಾಯಿ ಹೃದಯಕ್ಕೆ ಅರ್ಥವಾಗುವುದಿಲ್ಲ..ಮನೆಯ ಹಣ ದೋಚಿಕೊಂಡು ಹೋಗಿದ್ದಾನೆ ಅಂತ ಅವ್ರಿಗೆ ಗೊತ್ತಾದ್ರೆ..?!

ಬಹಳ ದಿನ ಆ ಸತ್ಯವನ್ನು ಅವರಿಂದ ಮುಚ್ಚಿಡಲಾಗುವುದಿಲ್ಲ..ಈಗ ಆಸ್ಪತ್ರೆ ಫೀಸಿಗೆ ಹಣ ತರಲು ಮನೆಗೆ ಬಂದಾಗ ಹಣ ಕಾಣೆಯಾಗಿರುವ ಬಗ್ಗೆ ತಿಳಿಯದೇ ಇರುತ್ತಾ..? ಆಗ ಏನೆಂದು ತಿಳಿಸುವುದು..? ಸೂರ್ಯ ಸ್ಟೇಶನ್ನಲ್ಲಿ ಇಲ್ಲವೆಂದು ತಿಳಿದರೆ ಮತ್ತೆ.. ಅವರ ದುಃಖ ಹೆಚ್ಚುತ್ತದೆ..ಅವ್ರ ಹತ್ರ ಸುಳ್ಳು ಹೇಳಲು ಮನಸಿಲ್ಲ.. ಸತ್ಯ ಹೇಳಲು ಧೈರ್ಯ ಸಾಲುತ್ತಿಲ್ಲ..!

ಅಪೂರ್ವಳಲ್ಲೂ ಆದರ್ಶನಿಗೆ ಕಾಡುತ್ತಿದ್ದ ದ್ವಂದ್ವವೇ ಕಾಡುತ್ತಿತ್ತು. ಅವಳಿಗೂ ಏನು ಮಾಡಬೇಕೆಂದು ತೋಚದೇ ಯೋಚನೆಗೊಳಗಾದಳು.

'ನಾನ್ಗೆ ರೌಂಡ್ಸ್‌ಗೆ ಹೋಗ್ಬೇಕು..ಸಾಯಂಕಾಲ ತನಕ ನನ್ಗೆ ಡ್ಯೂಟಿ ಇದೆ.. ಸಂಜೆಯೊಳಗೆ ಏನು ಮಾಡ್ಬೇಕು ಅಂತ ಯೋಚಿಸಿ ಒಂದು ನಿರ್ಧಾರಕ್ಕೆ ಬರೋಣ..' ಎಂದು ಆ ವಿಷಯಕ್ಕೆ ಅಲ್ಪವಿರಾಮ ಹಾಕಿದ. ಅಪೂರ್ವ ಕಾಳೆಲೆದುಕೊಂಡು ಲಿಫ್ಟ್‌ನ ಕಡೆ ಹೆಜ್ಜೆ ಹಾಕಿದಳು. ಅವಳು ವಾರ್ಡ್ ಅನ್ನು ತಲುಪಿದ ಕೆಲವೇ ನಿಮಿಷಗಳಲ್ಲಿ ವಸುಮತಿಯ ಪತಿ ಶಂಕರ ಅವಳ ಮೊಬೈಲ್‌ಗೆ ಕರೆ ಮಾಡಿದ್ದ. 'ನಾನು ಚಿಕ್ಕಪ್ಪ ಮಾತಾಡ್ತಿರೋದು.. ಪ್ರಭಾಕರ ರಾಯರು ಇರುವ ಆಸ್ಪತ್ರೆ ವಿಳಾಸ ಹೇಳು..ನಾವಿಲ್ಲಿ ಮೆಜೆಸ್ಟಿಕ್‌ಗೆ ಬಳಿ ಇಳಿದಿದ್ದೇವೆ..ನನ್ನೊತೆ ನಿನ್ನ ಚಿಕ್ಕಮ್ಮ ಮತ್ತು ಮಕ್ಳು ಬಂದಿದ್ದಾರೆ..'

ಅಪೂರ್ವ ಆಸ್ಪತ್ರೆಯ ವಿಳಾಸ ತಿಳಿಸಿದಾಗ,'ಎರಡು ತಾಸಿನೊಳಗೆ ಅಲ್ಲಿರ್ತೇವೆ' ಎಂದ ಶಂಕರ ಸಂಪರ್ಕ ಕಡಿದ. ಅವಳ ಸಂಭಾಷಣೆಯನ್ನು ಆಲಿಸಿದ ವಿಜಯಮ್ಮನ ಮುಖದಲ್ಲಿ ಅಸಮಾಧಾನ ಮೂಡಿತು. 'ಅವ್ರೆಲ್ಲಾ ಈಗ, ಇಲ್ಲಿ ಯಾಕೆ ಬರೋದಿಕ್ಕೆ ಹೋದ್ರು..? ಅವ್ರಿಗೆ ನೀನ್ಯಾಕೆ ಇದನ್ನೆಲ್ಲಾ ತಿಳಿಸೋದಿಕ್ಕೆ ಹೋದೆ..?' ವಿಜಯಮ್ಮನ ದನಿ ಇದಕ್ಕಿದ್ದಂತೆ ಗಡುಸಾಯಿತು. ಅಪೂರ್ವಳ ಮುಖ ಸಪ್ಪಗಾಯಿತು. 'ಚಿಕ್ಕಮ್ಮ ಕರೆ ಮಾಡಿದಾಗ, ರಾಯರು ಆಸ್ಪತ್ರೇಲಿದ್ದಾರೆ ಅಂತ ಹೇಳ್ದೆ..ಅವ್ರು ಅದಕ್ಕೆ ಹೊರಟು ಬಂದ್ಬಿಟ್ಟಿದ್ದಾರೆ..'

'ಸುಮ್ನೆ.. ಇಲ್ಲದ ರಗಳೇನ್ನ ಮೈಮೇಲೆ ಎಳ್ಕೊಂಡಂತಾಗಿದೆ ಇದು..' ವಿಜಯಮ್ಮ ಗೊಣಗಿಕೊಂಡಾಗ ಅಪೂರ್ವಳಿಗೆ ಅಳುವೇ ಬರುವಂತಾಯಿತು. ಆ ಮಾತುಗಳನ್ನು ತನ್ನನ್ನೇ ಉದ್ದೇಶಿಸಿ ನುಡಿದಂತೆನ್ನಿಸಿ ಅವಮಾನದಿಂದ ಕಣ್ಣೀರುಕ್ಕಿ ಬಂದಿತ್ತು. ಅವರ ಮುಂದೆ ನಿಲ್ಲಲಾರದೇ, ಕೆಳಗಿಳಿದು ಬಂದಳು. ಆಸ್ಪತ್ರೆಯ ಹಿಂದೆ ಸಣ್ಣ ಉದ್ಯಾನವಿತ್ತು. ಅಲ್ಲೇ ಕಲ್ಲು ಬೆಂಚೊಂದರ ಮೇಲೆ ಖಿನ್ನಳಾಗಿ ಕುಳಿತಳು.

ಹಿಂದೆಂದೂ ವಿಜಯಮ್ಮ ಈ ರೀತಿಯಲ್ಲಿ ಅಸಹನೆ, ಕೋಪ ಪ್ರದರ್ಶಿಸಿರಲಿಲ್ಲ. ಇಂದೇನಾಗಿದೆ ಅವರಿಗೆ? ಸೂರ್ಯನ ಕುರಿತು ಚಿಂತೆಯೇ? ರಾಯರ ಅನಾರೋಗ್ಯ ಅವರನ್ನು ದುರ್ಬಲಗೊಳಿಸಿರಬಹುದೇ? ತಾನು ಇವರಿಗೆ ವೃಥಾ ರಗಳೆಯಾಗಿ ಬಿಟ್ಟಿದ್ದೇನೆಯೇ? ಅವರೇ ಸಂಸಾರಿಕ ಜಂಜಾಟ ಗಳಲ್ಲಿ ನಲುಗಿರುವಾಗ ತನ್ನ ಹೊಣೆ ಅವರಿಗೆ ಮೂಗುಬ್ಬಸವಾಗಿರಬಹುದು..! ತಾನಾದರೂ ಏನು ಮಾಡಲಿ..? ಎಲ್ಲಿ ಹೋಗಲಿ..ತನ್ನ ಅಸಹಾಯಕ ಪರಿಸ್ಥಿತಿ ಯಾರಿಗೂ ಬರಬಾರದು..ಇವರ ಎದೆಯ ಮೇಲೆ ಭಾರದ ಬಂಡೆಯಾಗಿ ತಾನು ಕುಳಿತಿರುವಂತಾಗಿದೆ. ಹೊರಲೂ ಆಗದ, ಇಳಿಸಲೂ ಆಗದ ಸ್ಥಿತಿ ಅವರಿಗೆ. ತಾನು ಈಗ ಅರ್ಧ ಹಾದಿ ಕ್ರಮಿಸಿದ್ದಾಗಿದೆ. ತನ್ನ ಗುರಿ ಸೇರಲು ಕೆಲವೇ ಸಮಯ ಬಾಕಿ ಉಳಿದಿದೆ. ಕೋಪ, ಸ್ವಾಭಿಮಾನ ತೋರಿಸಿ ತನ್ನ ಭವಿಷ್ಯವನ್ನು ಹಾಳು ಮಾಡಿಕೊಳ್ಳುವ ಬದಲು ಈ ಎಲ್ಲಾ ನೋವು, ಅಪಮಾನ ಸಹಿಸಿ ಗುರಿ ಸೇರುವುದಷ್ಟೇ ತನಗಿರುವ ದಾರಿ! ಸಾವಿರ ಪೆಟ್ಟು ಬಿದ್ದು ಅಲ್ಲವೇ ಒಂದು ಸುಂದರ ಶಿಲ್ಪವಾಗುವುದು. ತಾನು ಇದನ್ನೆಲ್ಲಾ ಸಹಿಸಲೇಬೇಕು. ಅನ್ಯ ವಿಧಿಯಿಲ್ಲ ಅವಳು ತನ್ನ ದುಗುಡದ ಹೊರೆಯೊಂದಿಗೆ ಎಷ್ಟೋ ಹೊತ್ತು ಹಾಗೇ ಕುಳಿತೇ ಇದ್ದಳು.

'ಮುಖದ ಮೇಲೆ ಬಿಸಿಲು ಬೀಳ್ತಾ ಇದೆ. ಆದ್ರೂ ಪ್ರಜ್ಞೆ ಇಲ್ದೇ ಹಾಗೇ ಕೂತಿದ್ದೀರಲ್ಲಾ. ಈಗ ಯಾರು ಏನಂದ್ರು..?' ಸಮೀಪದಲ್ಲೇ ಆದರ್ಶನ ದನಿ ಕೇಳಿಸಿ ತನ್ನ ಚಿಂತೆಗಳನ್ನು ಕೊಡವಿಕೊಂಡು ಎದ್ದಳು. ಅವನ ಕಾಳಜಿ ಅಧಿಕ ಪ್ರಸಂಗಿತನವಾಗಿ ತೋರಿ ಸಿಡುಕಿದಳು. 'ನಿಮ್ಗೆ ಮಾಡ್ಲಿಕ್ಕೆ ಬೇರೇನೂ ಕೆಲಸವಿಲ್ವಾ..? ಬರೀ ನನ್ನ ಹಿಂದೆ ಬಿದ್ದಿದ್ದೀರಲ್ಲಾ. ನಿಮ್ಗೆ ಯಾಕೆ ನನ್ನ ಉಸಾಬರಿ..?' ಅಸಹನೆಯಿಂದ ರೇಗಿದಳು. ಅವಳ ಖಾರ ಪ್ರತಿಕ್ರಿಯೆ ನಿರೀಕ್ಷಿಸದ ಆದರ್ಶ ಪೆಚ್ಚಾದ. 'ಐ ಆಂ ಸಾರಿ..ನಾನಿಲ್ಲಿ ನನ್ನ ಸೀಟಿನಲ್ಲಿ ಕೂತಾಗ ಈ ಕಿಟಕಿಯಲ್ಲಿ ನೀವು ಕೂತಿದ್ದು ಕಾಣಿಸ್ತು. ಯಾಕೋ ಬೇಸರದಲ್ಲಿದ್ದಂತೆ ಕಂಡು ಬಂತು. ಅದಿಕ್ಕೇ ಬಂದೆ. ನಿಮ್ಮ ವೈಯುಕ್ತಿಕ ವಿಚಾರ ಕೇಳುವ ಹಕ್ಕು ನನಗಿಲ್ಲ ನಿಜ..ಕ್ಷಮಿಸಿ'. ಅವನು ಬಂದ ಹಾದಿಯಲ್ಲೇ ಸರಸರನೇ ಬೆನ್ನು ಮಾಡಿ ನಿರ್ಗಮಿಸಿದಾಗ ಅಪೂರ್ವಳಿಗೆ ತನ್ನ ದುಡುಕುತನಕ್ಕೆ ತನ್ನ ಬಗ್ಗೆಯೇ ಜಿಗುಪ್ಸೆ ಯಾಗಿತ್ತು. ಅಲ್ಲೇ ಕಲ್ಲು ಬೆಂಚಿನ ಮೇಲೆ ಕುಸಿದು ತಲೆಯೊತ್ತಿಕೊಂಡಳು.

ಇದೆಲ್ಲಾ ಏನಾಗುತ್ತಿದೆ? ಹಾಯಾಗಿ ತೇಲುತ್ತಿದ್ದ ನೀರಿನ ಅಲೆಯಲ್ಲಿ ಉಬ್ಬರವೆದ್ದಂತಾಗಿದೆ ತನ್ನ ಸ್ಥಿತಿ! ತಾನು ತನ್ನ ತರಗತಿಗಳು, ತನ್ನ ಮನೆ ಇದಿಷ್ಟೇ ಪ್ರಪಂಚವಾಗಿದ್ದ ತನ್ನ ಬದುಕಿನ ಪರಿಧಿ ಈಗ ಎತ್ತೆತ್ತಲೋ ವಿಸ್ತರಿಸಿದಂತಾಗಿದೆ. ಇದೆಲ್ಲಾ ಆಗಿರುವುದು ಆ ಸೂರ್ಯನ ಆಗಮನದಿಂದ..! ಇಡೀ ಪ್ರಪಂಚಕ್ಕೆ ಬಾನಲ್ಲಿ ಬರುವ ಸೂರ್ಯ ಬೆಳಕು ಹೊತ್ತು ಬಂದರೆ, ಈ ಸೂರ್ಯ ಮಾತ್ರ ಕತ್ತಲು ಹೊತ್ತು ತಂದಿರುವನೇ? ಅವನು ಬಂದು ಎಲ್ಲರ ಮನಸ್ಸನ್ನು ರಾಡಿ ಗೊಳಿಸಿದ್ದಾನೆ..! ಅವನು ಬಾರದೇ ಹೋಗಿದ್ದರೆ ರಾಯರು ಇಂದು ಆಸ್ಪತ್ರೆ ಸೇರುವ ಪ್ರಮೇಯವೇ ಬರುತ್ತಿರಲಿಲ್ಲ ಎನಿಸಿತ್ತು.